ಮೊದಲೆ ಯೋಚಿಸಿ, ಯೋಜನೆಯೊಂದನ್ನು ರೂಪಿಸಿ, ಕೊಲೆ ಮಾಡಬೇಕಾದ ತಂತ್ರವನ್ನು ಹೆಣೆಯಲಾಗಿತ್ತೆ? ಕೊಲೆಯಾಗಿದ್ದರೂ ಅದನ್ನು ಆಕಸ್ಮಿಕವಾಗಿ ನಡೆದುಹೋದ ದುರಂತ ಎಂದು ಬಿಂಬಿಸುವ ಪ್ರಯತ್ನ ಮಾಡಲಾಗಿದೆಯೆ?

ಕೊಲೆಯನ್ನು ಮೊದಲೇ ಯೋಜಿಸಲಾಗಿದ್ದರೆ ಇದನ್ನು ಯೋಜಿಸಿದವರು ಯಾರು? ಇದರ ಹಿಂದಿನ ಸೂತ್ರಧಾರರು ಯಾರು? ಅದನ್ನು ನಿರ್ವಹಿಸಿದವರು ಯಾರು? ಅನುಸೂಯ ತನಗೆ ಇದರ ಬಗ್ಗೆ ಗೊತ್ತೇ ಇಲ್ಲವೆಂದು ಹೇಳುತ್ತ ಸ್ಟೇಷನ್‌ನಲ್ಲಿಯೇ ಎರಡು ಸಲ ಪ್ರಜ್ಞೆ ತಪ್ಪಿ ಬಿದ್ದಿದ್ದಾಳೆ. ಆಕೆ ಹೇಳಿದಳಂತೆ. ತಮ್ಮ ಹೊಟೇಲಿಗೆ ನೂರೆಂಟು ರೀತಿಯ ಮಂದಿ ಬರುತ್ತಾರೆ, ಅವರನ್ನೆಲ್ಲ ನೆನಪಿಡಲು ಆಗುತ್ತದೆಯೆ? ಹೊಟೇಲಿಗೆ ಡ್ರೈವರ್ ಕಂಡಕ್ಟರ್‌ಗಳು ಬರುವುದು ಸಾಮಾನ್ಯವೇ ತಾನೆ? ಇದರಲ್ಲಿ ಸಂಶಯಪಡುವಂತಹದ್ದು ಏನಿದೆ? ಕಂಡಕ್ಟರ್ ಸಾಲ ಕೊಡುವುದಾಗಲಿ, ಬಡ್ಡಿ ತೆಗೆದುಕೊಳ್ಳುವುದಾಗಲಿ ತನಗೆ ಏನೂ ಗೊತ್ತಿಲ್ಲ. ಅವರಿಬ್ಬರೂ ಹೊಡೆದಾಡಿ ಮುಗಿದ ಮೇಲೆ, ಕಂಡಕ್ಟರ್ ಕೆಳಗೆ ಬಿದ್ದ ಮೇಲೆ ತಾನು ಹೊರಗೆ ಬಂದಿದ್ದು. ಅದನ್ನೆಲ್ಲ ನೋಡಿ ಜೀವದೊಳಗೆ ಜೀವವಿಲ್ಲದಂತೆ ರಸ್ತೆಗೆ ಓಡಿಹೋಗಿದ್ದು. ಅನಸೂಯೆ ಕಂಡಕ್ಟರ್‌ಗೆ ಗಾಳ ಹಾಕಿ ದುರ್ಗಪ್ಪನಿಂದ ಹತ್ಯೆ ಮಾಡಿಸಿರಬಹುದೆ? ಕಂಡಕ್ಟರ್‌ನನ್ನು ಒಳಗೆ ಕೊಲೆ ಮಾಡಿ ನಂತರ ಹೊರಗೆ ತಂದು ಹಾಕಿರಬಹುದೆ? ಇಲ್ಲವೆ ಆತ ಹೊಟೇಲಿಗೆ ಕಾಲಿಡುವುದಕ್ಕೆ ಮೊದಲೇ ಬಾಗಿಲ ಬಳಿ ಹತ್ಯೆ ಮಾಡಲಾಯಿತೆ? ಯೋಚಿಸಿದಷ್ಟೂ ಅದು ಕಗ್ಗಂಟಾಯಿತು.



ಹೊಟೇಲಿನ ಒಳಗೆ ಅಸ್ತವ್ಯಸ್ತವಾದುದು ಏನೂ ನಡೆದಿಲ್ಲ. ಹೊಸ್ತಿಲ ಮೇಲೆಯೂ ಹೇಳಿಕೊಳ್ಳುವಂತಹ ಗುರುತುಗಳಿಲ್ಲ. ಕೊಲೆಯಾದವರನ್ನು ಎಳೆದುಕೊಂಡು ಬಂದಿರುವ ಸಾಧ್ಯತೆಗಳು ಕಡಿಮೆ. ಏನೇ ಇದ್ದರೂ ಈ ಹತ್ಯೆ ಬಹಳ ವ್ಯವಸ್ಥಿತ ರೀತಿಯಲ್ಲಿ ಮಾಡಲಾಗಿದೆ. ಅಪರಾಧಿಗಳು ತಾವು ಸಿಕ್ಕಿಬೀಳಬಾರದೆಂದು ಬಹಳ ಯೋಚನೆ ಮಾಡಿ, ಎಷ್ಟೋ ದಿನಗಳಿಂದ ಯೋಜನೆ ಮಾಡಿ ಇದನ್ನು ಕಾರ್ಯಗತಗೊಳಿಸಿದ್ದಾರೆ! ಅದರಲ್ಲಿ ಸಂಶಯವೇ ಇಲ್ಲ. ಈ ಕೊಲೆಯ ಬಗ್ಗೆ ಪೊಲೀಸರು ಏನೇ ಮಾಹಿತಿ ಕೇಳಿದರೂ ಜನರು ಉಪಾಯದಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಆ ವಿಷಯ ತೆಗೆದರೆ ಸಾಕು, ಜನರಿಗೆ ನಡುಕ ಬರುತ್ತದೆ. ಯಾರೂ ಈಗ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡುತ್ತಿಲ್ಲ. ಕಣ್ಣು ತಪ್ಪಿಸಿಕೊಳ್ಳುವುದು ಜನರಿಗೆ ಹೊಸ ಉದ್ಯೋಗವಾಗಿದೆ. ಹೊಲಮನೆಯ ಕೆಲಸ ತೊರೆದ ಜನರಿಗೆ ಹಗಲುರಾತ್ರಿ ಇದರ ಭೂತವೆ ಕಾಡುತ್ತದೆ. ಅವರದು ಒಂದೇ ಲಕ್ಷ್ಯ. ತಾವು ಪೊಲೀಸ ಸ್ಟೇಷನ್ನಿನ ಮೆಟ್ಟಿಲು ಹತ್ತದಿದ್ದರೆ ಸಾಕು. ಜೈಲಿಗೆ ಹೋಗದಿದ್ದರೆ ಸಾಕು! ಪ್ರತಿಯೊಂದಕ್ಕೂ ಜನರ ಉತ್ತರ ಮಜವಾಗಿರುತ್ತಿತ್ತು.

‘ನಮಗೇನೂ ಗೊತ್ತಿಲ್ಲ. ನಾವು ಏನೂ ನೋಡಿಲ್ಲ. ಆ ದಿನ, ನಾವು ಆ ಕಡೆ ಹೋಗೇ ಇಲ್ಲ’ ಇಂತಹ ಮಾತು ಕೇಳಿ ಕೇಳಿ ಪೊಲೀಸ ಹವಾಲ್ದಾರನ ಮೈಯೆಲ್ಲ ಉರಿಯುತ್ತಿತ್ತು. ಆತ ಒಂದೆರಡು ಸಲ ಸಿಟ್ಟಿನಿಂದ ಒದರಿದ. ‘ಏನಿದು? ಪ್ರತಿಯೊಂದಕ್ಕೂ ನೋಡೇ ಇಲ್ಲ, ಗೊತ್ತೇ ಇಲ್ಲ ಅಂತ ಹೇಳ್ತಿದೀರಿ. ಈಗ ನಾ ನಿಮ್ಮ ಎದುರಿಗೆ ನಿಂತೇನಿ. ನಾ ನಿಂತಿದ್ದು ನಿಮಗೆ ಕಾಣಿಸಲಿಕ್ಕೆ ಹತ್ತೇದೋ, ಇಲ್ಲೋ? ಅದನ್ನಾದ್ರೂ ಹೇಳ್ರಿ. ನೀವು ಹೇಳದಿದ್ರ ನಿಮ್ಮನ್ನ ಕೊಂದೇಬಿಡ್ತೇನಿ.’ ಅವನ ಟಬರಿಗೆ ಎಷ್ಟೋ ಗಂಡಸರು ಉಚ್ಚೆ ಹೊಯ್ದುಕೊಂಡರು. ಕೆಲವೊಮ್ಮೆ ಹವಾಲ್ದಾರ್ ಸಿಟ್ಟಿನಿಂದ ಹಿರಿಯ ಕಾನಸ್ಟೇಬಲ್‌ಗೆ ಜೋರು ಮಾಡುವನು.

‘ಏಯ್, ಕಾನಸ್ಟೇಬಲ್ ಏನ್ ನೋಡಲಿಕ್ಕೆ ಹತ್ತೀದಿ? ಸ್ವಲ್ಪ ಜಬರಸೋದನ್ನ ಕಲ್ಯೋ. ನೀ ಇಷ್ಟು ಮಳ್ಳನಂಗ ವಿಚಾರಣೆ ಮಾಡಿದ್ರ ಈ ಹಳ್ಳಿ ಮಂದಿ ಹೊಳ್ಳಿ ಇದೇ ಊರಾಗ ನಮ್ಮನ್ನೆ ಮಣ್ಣು ಕೊಟ್ಟು, ತಮಗೆ ಏನೂ ಗೊತ್ತಿಲ್ಲದಂಗ ಇರ್ತಾರು. ಗೊತ್ತಾತೇನು?’ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುವಲ್ಲಿ ಜನರು ಜಾಣರು! ಒಮ್ಮೊಮ್ಮೆ ಐದಾರು ಮಂದಿ ಪೊಲೀಸರು ಆ ಓಣಿ, ಈ ಓಣಿ ಅಡ್ಡಾಡುವರು. ಕತ್ತಲ ಮನೆಯ ಕಿಟಕಿಯೊಳಗಿಂದ ಹೆಂಗಸರ ಧ್ವನಿ ಕೇಳುತ್ತಿತ್ತು. ‘ಮನ್ಯಾಗ ಯಾರೂ ಇಲ್ರಿ. ಯಜಮಾನರು ಹೊಲಕ್ಕೆ ಹೋಗ್ಯಾರ. ಮಗ ಊರಿಗೆ ಹೋಗ್ಯಾನ.’ ಪೊಲೀಸರು ತಮಗೆ ಮುಖ್ಯವೆನಿಸುವ ಅನೇಕರನ್ನು ವಿಚಾರಿಸಿದರು. ‘ಕಂಡಕ್ಟರನನ್ನ ನಾವು ಬಸ್ಸಿನೊಳಗ ನೋಡತಿದ್ವಿ, ಟಿಕೆಟ್ ಕೊಡುತ್ತಿದ್ದ, ಅಷ್ಟೇ ಗೊತ್ತು. ದುರ್ಗಪ್ಪ ಕೂಲಿಯಂವ. ಪಾಪ, ಮಕದ ಮ್ಯಾಲ ಈಗ ಮೀಸಿ ಮೂಡಲಿಕ್ಕೆ ಹತ್ತಿದ್ವು. ಅಷ್ಟೇ ನಮಗ ಗೊತ್ತಿದ್ದದ್ದು. ಅದನ್ನು ಬಿಟ್ಟು ಬ್ಯಾರೆ ಗೊತ್ತಿಲ್ಲ. ಚಾದಂಗಡಿಗೆ ಹೋಗೋದಾ? ಸಾಯೇಬ್ರೇ, ನಾವು ರೈತರು. ನಸುಕಲೆ ಹೊಲದಾಗ ಇರಾವು. ರಾತ್ರಿ ದೀಪ ಹಚ್ಚಿದ ಮ್ಯಾಲ ಮನಿಗೆ ಬರಾವು. ಅಂತಹದರಾಗ ಹೊಟೇಲಿಗೆ ಯಾಕ ಹೋಗೋಣ್ರಿ? ನಮಗೆ ಹೊಟೇಲಂದ್ರನ ಆಗಿ ಬರಂಗಿಲ್ಲ.’ ಎಲ್ಲರ ಉತ್ತರಗಳೂ ಒಂದೇ. ಈ ಊರಲ್ಲಿ ಒಂದಲ್ಲ, ಹತ್ತು ಕೊಲೆಗಳಾದರೂ ಬಿಡಿಸುವುದು ಕಷ್ಟದ ಮಾತು!

‘ತಮ್ಮೂರಲ್ಲಿ ಒಂದು ಹೊಟೇಲ್ ಇದೆಯೆಂದೆ ತಮಗೆ ಗೊತ್ತಿರಲಿಲ್ಲ!’ ಎನ್ನುವ ಮಾತುಗಳನ್ನೂ ಕೆಲವರು ಹೇಳಿದಾಗ ಪೊಲೀಸರಿಗೆ ಮತ್ತು ವಕೀಲರಿಗೆ ನಗು ಬರುತ್ತಿತ್ತು, ಅಷ್ಟೇ ಸಿಟ್ಟೂ ಬರುತ್ತಿತ್ತು. ಜನ ಇಷ್ಟೊಂದು ಸುಳ್ಳು ಹೇಳಬಲ್ಲರೆ? ತಾವು ಸರಳವೆಂದು ತಿಳಿದಿರುವ ಪ್ರಕರಣಗಳಲ್ಲಿ ಎಷ್ಟೆಲ್ಲ ಗೋಪ್ಯತೆ